ಎಮ್.ವಿ.ಸಿ.ನಂ.832/2023
ಪಿಡಬ್ಲೂ 1

**(ಇಂದು ದಿಃ 17.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)**

ಪಾಟೀ ಸವಾಲು ಃ- ಶ್ರೀ ಜಿ ಎ ಡಿ ವಕೀಲರಿಂದ 2 ನೇ ಎದುರುದಾರರ ಪರ ಃ-

ನಾನು 12 ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಸಾಕ್ಷ್ಯವನ್ನು ನನ್ನ ಮತ್ತು 1 ನೇ ಅರ್ಜಿದಾರರ ಪರ ನೀಡುತ್ತಿದ್ದೇನೆ. ನನ್ನ ತಂದೆಯ ಹೆಸರು ಪ್ರಕಾಶ ಮೂಳೆ ಎಂದರೆ ಸಾಕ್ಷಿಯು ತುಳಸೀರಾಮ ಮೂಳೆ ಎಂದು ನುಡಿಯುತ್ತಾರೆ. ನನ್ನ ತಂದೆಯ ಹೆಸರು ತುಳಸೀರಾಮ ಮೂಳೆ ಎಂದು ತೋರಿಸಲು ನನ್ನ ಬಳಿ ಆಧಾರ ಕಾರ್ಡ ನನ್ನ ಬಳಿ ಇದೆ ಅದನ್ನು ಹಾಜರು ಮಾಡಿದ್ದೇನೆ. ನಾನು ನನ್ನ ಆಧಾರ ಕಾರ್ಡನ್ನು ಹಾಜರು ಮಾಡಿದ್ದೇನೆ ಎಂದು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ಮಮ್ಮಾದೇವಿ ನನ್ನ ತಾಯಿಯ ಸಹೋದರಿಯಾಗಬೇಕು. ಮೃತಳು ನನ್ನ ತಾಯಿಯ ಕಿರಿಯ ಸಹೋದರಿಯಾಗಿರುತ್ತಾಳೆ. 1ನೇ ಅರ್ಜಿದಾರಳು ಮತ್ತು ಮೃತ ಮಮ್ಮಾದೇವಿ ಸಹೋದರಿಯರು ಎಂದು ತೋರಿಸಲು ದಾಖಲೆ ಹಾಜರು ಮಾಡಿದ್ದೇನೆ. ಸಾಕ್ಷಿಯು ಆಧಾರ ಕಾರ್ಡನ್ನು ಹಾಜರು ಮಾಡಿದ್ದೇನೆ ಎಂದು ನುಡಿಯುತ್ತಾರೆ. ಮೃತ ಮಮ್ಮಾದೇವಿ ನನ್ನ ಮೌವಸಿಯಾಗಬೇಕು. ನಾನು ಮೃತಳ ವಾರಸಾ ಪ್ರಮಾಣ ಪತ್ರ ಹಾಜರು ಮಾಡಿರುವುದಿಲ್ಲ. ನಾನು ಮೃತಳ ಸಹೋದರಿಯ ಮಗ ಎಂದು ಸುಳ್ಳು ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಮೃತಳಿಗೂ ಹಾಗೂ ನನಗೆ ಯಾವುದೇ ಸಂಬಂಧ ಇರದೇ ಇದ್ದರೂ ಸಹ ಸುಳ್ಳು ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಪ್ರಸ್ತುತ ಅಪಘಾತವು ದಿಃ 24.01.2023 ರಂದು ಆಗಿರುತ್ತದೆ. ಪ್ರಸ್ತುತ ಅಪಘಾತವು ಬೆಳಿಗ್ಗೆ 06.00 ಗಂಟೆಗೆ ಆಗಿರುತ್ತದೆ. ಅಪಘಾತದ ಬಗ್ಗೆ ನನಗೆ ರಾಜು ಕಾಲಬೋರ್ ಎಂಬುವವರು ತಿಳಿಸಿರುತ್ತಾರೆ. ಸದರಿಯವರು ಒಂದು ಮಗುವಿನೊಂದಿಗೆ ಮಾಹಿತಿಯನ್ನು ನೀಡಿದರು. ಸದರಿ ಅಪಘಾತವು ಸೋಲ್ಲಾಪೂರ - ಪುಣೆ ಹೆದ್ದಾರಿಯಲ್ಲಿ ಆಗಿರುತ್ತದೆ. ಸದರಿ ರಸ್ತೆಯಲ್ಲಿ ವಾಹನಗಳ ಸಂದಣಿ ಇರುತ್ತದೆ ಎಂದರೆ ಸಾಕ್ಷಿಯು ಬೆಳಗಿನ ಜಾವದಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ಹೆದ್ದಾರಿಯಲ್ಲಿ ನಡೆದುಕೊಂಡು ಹೋಗುವುದು ತಪ್ಪು ಎಂದರೆ ಸರಿಯಲ್ಲ. ಪ್ರಸ್ತುತ ಅಪಘಾತವು ಲಕ್ಸೂರಿ ವಾಹನ ಮಾಡಿರುತ್ತದೆ. ಅದರ ನಂಬರ್ ನನಗೆ ನೆನಪಿಲ್ಲ. ಸದರಿ ವಾಹನ ಚಾಲಕನ ಹೆಸರು ಮತ್ತು ವಾಹನದ ನಂಬರ್ ನನಗೆ ನೆನಪಿಲ್ಲ. ಅಪಘಾತದ ನಂತರ ಸದರಿಯವರಿಗೆ ಲೋಣಿ ಕಾಲಬೋರ್ ಗ್ರಾಮದ ವಿಶ್ವಜೀತ ಆಸ್ಪತ್ರೆಗೆ ದಾಖಲಿಸಲಾಯಿತು. ಸದರಿ ಆಸ್ಪತ್ರೆಯ ದಾಖಲೆಗಳನ್ನು ಹಾಜರು ಮಾಡಿರುತ್ತೇನೆ. ಅಪಘಾತದ ದಿನದಂದೇ ಸದರಿಯವರು ಮೃತಪಟಟಿರುತ್ತಾರೆ. ಸದರಿಯವರು ಚಿಕಿತ್ಸಾ ಕಾಲದಲ್ಲಿ ಮೃತಪಟ್ಟರು ಎಂದು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿಯವರು ಕೂಲಿ ಕೆಲಸ ಮಾಡುತ್ತಿದ್ದರು. ಮೃತಳಿಗೆ

ಮಾಸಿಕವಾಗಿ ರೂ.30,000/- ಆದಾಯ ಇತ್ತು ಎಂದು ತೋರಿಸಲು ದಾಖಲೆ ಮಾಡಿಲ್ಲ. ಸದರಿಯವರು ನಿರ್ಲಕ್ಷತನದಿಂದ ರಸ್ತೆಯಲ್ಲಿ ನಡೆದ್ದಿರಿಂದ ಪ್ರಸ್ತುತ ಅಪಘಾತವಾಗಿದೆ ಎಂದರೆ ಸರಿಯಲ್ಲ. ನನಗೆ ಈಗ 35 ವರ್ಷ ವಯಸ್ಸು ಇರುತ್ತದೆ. ನಾನು ಮೃತಳ ಆದಾಯದ ಮೇಲೆ ಅವಲಂಬಿತವಾಗಿರಲಿಲ್ಲ ಎಂದರೆ ಸರಿಯಲ್ಲ. ನಾವು ಮೃತಳ ಚಿಕಿತ್ಸೆಗಾಗಿ ರೂ.20,000/- ಖರ್ಚು ಮಾಡಿದ್ದೇವೆ ಎಂದು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

ಪ್ರಭಾರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಎಮ್.ಎ.ಸಿ.ಟಿ., ಆಳಂದ